ವಿವರ	ಕೆಲಸ ನಿರ್ವಹಿಸಬೇಕಿದ್ದವರು (ಮಂಜೂರಾತಿ)	ಕೆಲಸ ನಿರ್ವಸುತ್ತಿರುವವರು
ಚಾಲಕರು	168	167
ನಿರ್ವಾಹಕರು	168	165
ಮೆಕ್ಯಾನಿಕ್	94	7

1996ರ ಜನವರಿಯಿಂದ 1997 ರ ಜನವರಿಯವರೆಗೆ ಅನಧಿಕೃತ ಗೈರು ಹಾಜರಿಯಾದ ಚಾಲಕರ, ನಿರ್ವಾಹಕರ ಮತ್ತು ಮೆಕ್ಯಾನಿಕ್‌ಗಳ ವಿವರ:

ಹುದ್ದೆ ವಿವರ	7 ದಿನದಿಂದ 1 ತಿಂಗಳು	1 ತಿಂಗಳಿಂದ 3 ತಿಂಗಳು	3 ತಿಂಗಳಿಂದ 6 ತಿಂಗಳು	6 ತಿಂಗಳಿಂದ 1 ವರ್ಷ
ಚಾಲಕರು	22	9	1	2
ನಿರ್ವಾಹಕರು	35	14	3	-
ಮೆಕ್ಯಾನಿಕ್	6	6	-	-

ಆ) ಹಾಸನ ವಿಭಾಗದಲ್ಲಿ ಖಾಲಿ ಇರುವ 35 ಚಾಲಕರು, 54 ನಿರ್ವಾಹಕರು, ಹಾಗೂ 23 ಕುಶಲಕರ್ಮಿ, 22 ಸಹಾಯಕ ಕುಶಲಕರ್ಮಿ ಮತ್ತು 94 ಸಹಾಯಕ 'ಬಿ' ಹುದ್ದೆಗಳನ್ನು ತುಂಬಲು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಿಂದ ಅರ್ಹ ಅಭ್ಯರ್ಥಿಗಳ ಪಟ್ಟಿ ಪಡೆದು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಹಾಸನ ವಿಭಾಗಕ್ಕೆ ಜನವರಿ 97 ರಂದು ಅನುಮತಿ ನೀಡಲಾಗಿದೆ. ಸಕಲೇಶಪುರ ಘಟಕವು ಹಾಸನ ವಿಭಾಗದ ಆಡಳಿತ ವ್ಯಾಪ್ತಿಗೆ ಬರುತ್ತದೆ. ಈ ಎಲ್ಲಾ ಹುದ್ದೆಗಳನ್ನು ಮೇ 97 ರ ಒಳಗೆ ಆಯ್ಕೆ ಮುಗಿಸಿ ತುಂಬಿಕೊಳ್ಳಲಾಗುವುದು.

ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಳೆ-ಬೆಳೆ ಅಭಿವೃದ್ಧಿ

608 (924) ಶ್ರೀ ಕೆ. ಎಶ್ವೇಶ್ವರ ಹೆಗಡೆ (ತಿಕೋಟಾ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಳೆ ಬೆಳೆ ಕೃಷಿ ಯೋಜನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರವು ಗುರುತಿಸಿದ ಪ್ರದೇಶ ಯಾವುವು;

ಇ) ಇದಕ್ಕಾಗಿ ಸರ್ಕಾರ ನೀಡುವ ಅನುದಾನವೆಷ್ಟು? (ಹೆಕ್ಟೇರುವಾರು);

ಈ) ಉತ್ತರ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಪ್ರವೇಶದಲ್ಲಿ ಇದನ್ನು ಬೆಳೆಯಲು ಸಾಧ್ಯವೇ;

ಉ) ಇದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ಹೌದು, ಕಾರ್ಯಕ್ರಮವಿದೆ. ಅನುಷ್ಠಾನವು ಇನ್ನೂ ಪ್ರಾರಂಬವಾಗಿಲ್ಲ.

ಆ) 1987ನೇ ಸಾಲಿನಲ್ಲಿ ತಾಂತ್ರಿಕ ಸಮಿತಿಯು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕು ಬನವಾಸಿ ಸುತ್ತಮುತ್ತಲ ಪ್ರದೇಶದಲ್ಲಿನ 1000 ಹೆಕ್ಟೇರ್ ಪ್ರದೇಶದಲ್ಲಿ ತಾಳೆ ಬೆಳೆ ಕೃಷಿ ಮಾಡಬಹುದೆಂದು ವರದಿ ನೀಡಿತ್ತು ತದನಂತರ 1995ನೇ ಸಾಲಿನಲ್ಲಿ ಪುನಃ ಸರ್ವೆ ಮಾಡಿ 50 ಮಾಡಿ 500 ಹೆಕ್ಟೇರ್ ಪ್ರದೇಶದಲ್ಲಿ ಬನವಾಸಿ ಸುತ್ತಮುತ್ತ ತಾಳೆ ಕೃಷಿ ಮಾಡಬಹುದೆಂದು ಅಭಿಪ್ರಾಯ ನೀಡಿತು.

ಇ) ತಾಳೆಬೆಳೆ ಕೃಷಿಗೆ ಒಂದು ಹೆಕ್ಟೇರ್‌ಗೆ 12,500 ರೂಪಾಯಿ ಅನುದಾನವನ್ನು ನಾಲ್ಕು ಕಂತುಗಳಲ್ಲಿ ನೀಡುತ್ತಿದೆ. (ಗೆ ಗೊಬ್ಬರ, ಔಷಧಿ ರೂಪದಲ್ಲಿ) ಇದರ ಜೊತೆಗೆ ಸಸಿಗಳಿಗೆ ಅನುದಾನ ರೂ. 3, 750 ಗಳನ್ನು ಕೊಡುತ್ತಿದೆ. ಒಟ್ಟಿಗೆ ಸೇರಿಸಿದಾಗ ಪ್ರತಿ ಹೆಕ್ಟೇರಿಗೆ 16,250-00 ರೂ.ಗಳಷ್ಟು ಅನುದಾನ ನೀಡಿದಂತಾಗುವುದು. ಇದರ ಜೊತೆಗೆ ಬ್ಯಾಂಕಿನ ಮುಖಾಂತರ ಸಾಲ ಪಡೆಯುವ ವ್ಯವಸ್ಥೆ ಇರುತ್ತದೆ.

ಈ) ಸದ್ಯದ ಪರಿಸ್ಥಿತಿಯಲ್ಲಿ ವರದ ಅಚ್ಚುಕಟ್ಟು ಪ್ರದೇಶದಡಿ ಶಿರಸಿ ತಾಲ್ಲೂಕು ಬನವಾಸಿ ಸುತ್ತಮುತ್ತಲು ತಾಳೆ ಬೆಳೆ ಕೃಷಿ ಮಾಡಲು ಗುರುತಿಸಿದೆ. ಉಳಿದ ನೀರಾವರಿ ಪ್ರದೇಶದಲ್ಲಿ ಬೆಳೆಸಲು ಸರ್ವೆ ಮಾಡಿ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರೀಸರ್ಚ್ ಇನ್‌ಸ್ಟಿಟ್ಯೂಟ್ ರವರಿಂದ ಅಭಿಪ್ರಾಯ ಪಡೆಯಬೇಕಾಗಿದೆ.

ಉ) ಮೂಲತಃ ತಾಳೆಬೆಳೆ ಕೃಷಿ ಅಭಿವೃದ್ಧಿಗಾಗಿ ಎಸ್ ಅಂಡ್ ಎಸ್ ಕಂಪನಿ ಸರ್ಕಾರದ ವತಿಯಿಂದ ವಹಿಸಲಾಯಿತು. ಅವರು ಈ ಪ್ರದೇಶ ತಾಳೆಬೆಳೆ ಕೃಷಿಗೆ ಕಡಿಮೆಯಾದ್ದರಿಂದ ಸಂಸ್ಕರಣ ಘಟಕ ಪ್ರಾರಂಭಿಸಲು ಆರ್ಥಿಕ ಕಾರಣಗಳಿಂದ ಸಾಧ್ಯವಿಲ್ಲವೆಂದು ಹಿಂದಕ್ಕೆ ಸರಿದರು. ಪುನಃ ಲಕ್ಷ್ಮಿ ಮೆಷಿನ್ ಎಂಟರ್ ಪ್ರೈಸಸ್‌ರವರಿಗೆ ಬೆಳೆ ಕೃಷಿಗೆ ಕೇಳಿಕೊಳ್ಳಲಾಗಿ, ಆದರೂ ಸಹ ಬೆಳೆ ವಿಸ್ತರಣೆಗೆ ಒಪ್ಪಿಕೊಳ್ಳಲಿಲ್ಲ. ಈ ವಿಷಯವು ಪರಿಶೀಲನೆಯಲ್ಲಿದೆ.

ಉತ್ತರ ದಕ್ಷಿಣ ಜಿಲ್ಲೆಯ ದೇವಸ್ಥಾನಗಳಿಗೆ ಅನುದಾನ

610 (925) ಶ್ರೀ ಕೆ. ವಿಶ್ವೇಶ್ವರ ಹೆಗಡೆ (ತಿಕೋಟಾ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು; ಹಾಗೂ ತಾಲ್ಲೂಕುಗಳಾವುವು; (ವಿವರ ನೀಡುವುದು);

ಆ) ಯಲ್ಲಾಪುರ-ಸಿರ್ಸಿ- ಅಂಕೋಲಾ ತಾಲ್ಲೂಕಿನಲ್ಲಿ ಯಾವ ಯಾವ ದೇವಸ್ಥಾನಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು)?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):